ಕಂಗಾಲಾಯಿತು. ಆ ಸಂದರ್ಭದಲ್ಲಿ ಆನ್‌ಲೈನ್ ತರಗತಿಗಳನ್ನು ನಡೆಸುವ ಮೂಲಕ ಈ ಕಲೆಯು ವಿದ್ಯಾರ್ಥಿಗಳ ಮನದಲ್ಲಿ ಮಾಸಿಹೋಗದಂತೆ ಮಾಡುವುದು ಸಾಧ್ಯವಾಯಿತು. ಈಗಲೂ ನಮ್ಮಲ್ಲಿ ಕಲಿತುಹೋದ ಅನೇಕ ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳನ್ನು ತೆಗೆದುಕೊಂಡು ನಮ್ಮ



ರಾಧಾ, ರಾಜಾ ಮತ್ತು ಕೌಸಲ್ಯಾ

ಮಾರ್ಗದರ್ಶನವನ್ನು ಪಡೆಯುತ್ತಾರೆ. ಹಿಮ್ಮೇಳ ಸಂಗೀತಕ್ಕೂ ತಂತ್ರಜ್ಞಾನದ ಆಧಾರವಿದೆ. ಇವೆಲ್ಲವೂ ನೃತ್ಯಕ್ಕೆ ಹೆಚ್ಚಿನ ಮೆರುಗು ನೀಡಿದೆ. ನೃತ್ಯವನ್ನು ಚೆನ್ನಾಗಿ ಪ್ರಸ್ತುತಪಡಿಸಬೇಕು ಎಂಬ ಆಶಯದೊಂದಿಗೆ ಇವುಗಳನ್ನು ಎಲ್ಲಿಯವರೆಗೆ ಬಳಸಿಕೊಳ್ಳುತ್ತೇವೋ, ಅಲ್ಲಿಯವರೆಗೆ ತಂತ್ರಜ್ಞಾನದಿಂದ ಯಾವುದೇ ಹಾನಿಯಿಲ್ಲ. ಆದರೆ ನೃತ್ಯ ಕ್ಷೇತ್ರದಲ್ಲಿ ಸಾಧನೆಯ ಕೊರತೆಯಿದ್ದಾಗ, ನಮ್ಮ ದೌರ್ಬಲ್ಯವನ್ನು ಮುಚ್ಚಿಕೊಳ್ಳುವುದಕ್ಕೆ ಯಾವಾಗ ತಂತ್ರಜ್ಞಾನದ ಮೊರೆ ಹೋಗುತ್ತೇವೋ ಆಗ ತಂತ್ರಜ್ಞಾನವು ಕಲೆಗೆ ಅಪಾಯಕಾರಿಯಾಗಿಬಿಡುತ್ತದೆ.

◆ **ನಿಮ್ಮ ಕೊರಿಯೊಗ್ರಫಿ ಅನುಭವಗಳ ಬಗ್ಗೆ ಹೇಳುವಿರಾ ?**

ಗುರು ಮಾಯಾರಾವ್ ಅವರ ಮಾರ್ಗದರ್ಶನವು ನಮ್ಮನ್ನು ಇಲ್ಲಿಯವರೆಗೆ ಕರೆದುಕೊಂಡು ಬಂದಿದೆ. ಕೂಚಿಪುಡಿ ನೃತ್ಯ ಕಲಿಕೆಗಾಗಿ ನಾವು ದೆಹಲಿಯಲ್ಲಿ 'ನಾಟ್ಯ ತರಂಗಿಣಿ' ಸಂಸ್ಥೆಯನ್ನು ಸ್ಥಾಪಿಸಿದ ಬಳಿಕ ಹೊಸ ಹೊಸ ಪ್ರಯತ್ನಗಳನ್ನು ಮಾಡುತ್ತ ಬಂದಿದ್ದೇವೆ. ಭರತನಾಟ್ಯ, ಕೂಚಿಪುಡಿ, ಮೋಹಿನಿಯಾಟ್ಟಂ, ಕಥಕ್, ಒಡಿಸ್ಸಿ ಮತ್ತು ಮಣಿಪುರಿ ನೃತ್ಯಗಳ ಬಂಧದೊಂದಿಗೆ ಹೊಸ ಪರಿಕಲ್ಪನೆಯನ್ನು ಪ್ರಸ್ತುತಪಡಿಸಿದ್ದೆವು. 'ವಿಶ್ವವೆಂದರೆ ದೇವರು' ಎಂಬ ಪರಿಕಲ್ಪನೆಗೆ ಹೆಚ್ಚು ಮನ್ನಣೆ ದೊರೆಯಿತು. 'ದಶಾವತಾರ' ಪ್ರಸ್ತುತಿಯಲ್ಲಿ ಹತ್ತು ಅವತಾರಗಳನ್ನು ನಾನು ಮತ್ತು ರಾಧಾ ಸೇರಿ ಪ್ರಸ್ತುತಪಡಿಸಿದೆವು. ನಾನು ಮತ್ಸ್ಯಾವತಾರ ಪ್ರದರ್ಶಿಸಿದರೆ, ಅವಳು ಕೂರ್ಮಾವತಾರ ಪ್ರದರ್ಶನಕ್ಕೆ ನರ್ತಿಸುತ್ತಿದ್ದಳು. ಹೀಗೆ ನಾನೂ ರಾಧಾ ಸ್ಪರ್ಧೆಗೆ ಬಿದ್ದು ಪ್ರದರ್ಶನ ನೀಡಿದ್ದೆವು. ನನಗೆ ಹೆಚ್ಚು ಚಪ್ಪಾಳೆಗಳು ಬಿದ್ದರೆ, ಅವಳು ಮತ್ತಷ್ಟು ತಲ್ಲೀನಳಾಗಿ ನರ್ತಿಸಿ ಚಪ್ಪಾಳೆ ಪಡೆಯುತ್ತಿದ್ದಳು. 'ಸಂಭವಾಮಿ ಯುಗೇಯುಗೇ' ಎನ್ನುವ ಸಮಾರೋಪದ ಪ್ರಸ್ತುತಿಯಲ್ಲಿ ನಾನು ಆದಿಶೇಷನಾಗಿ, ಅವಳು ಲಕ್ಷ್ಮಿಯಾಗಿ ಕಾಣಿಸಿಕೊಳ್ಳುತ್ತೇವೆ. ಈ ಕೊರಿಯೋಗ್ರಫಿಯ ಬಗ್ಗೆ ಅನೇಕ ರಸಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಕುರು ಯದುನಂದನ, ಅಷ್ಟಪದಿ, ಮಹಾನಟಂ, ಶಿವಲೀಲಾ ಮುಂತಾದ ಪರಿಕಲ್ಪನೆಗಳ ಜೊತೆಗೆ ರಾಷ್ಟ್ರಪತಿಯಾಗಿದ್ದ ಅಬ್ದುಲ್ ಕಲಾಂ ಅವರ ಹಾಡುಗಳಿಗೆ, ಮೀರಾ ಭಜನ್‌ಗಳಿಗೆ ಕೂಡ ಕೊರಿಯೊಗ್ರಫಿ ಮಾಡಿದ್ದು ನೆನಪಿನಲ್ಲಿ ಉಳಿದಿದೆ. ಒಟ್ಟಿನಲ್ಲಿ ಪ್ರದರ್ಶನ ಚೆನ್ನಾಗಿ ನಡೆಯಬೇಕು ಎಂಬ ಉತ್ಸಾಹದಲ್ಲಿ ನಾವಿಬ್ಬರು ನರ್ತಿಸುತ್ತೇವೆ. ಅದನ್ನೇ ನಮ್ಮ ಕಲಾಶಾಲೆಯಲ್ಲಿ ಕಲಿಸುತ್ತೇವೆ. ನಾಟ್ಯಶಾಲೆಯು